ಕರ್ನಾಟಕ ಸರ್ಕಾರ

ಸಂಖ್ಯೆ: ಉತಇ/ತ/ಲೆಪವಿ/ಬಜೆಟ್/ವಿ.ವ-5/2011-12

ಆಯುಕ್ತರ ಕಛೇರಿ
ಉದ್ಯೋಗ ಮತ್ತು ತರಬೇತಿ ಇಲಾಖೆ
ಕೌಶಲ್ಯ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29
ದಿನಾಂಕ: 8-7-2011

## ಸು ತ್ತೋ ಲೆ

**ವಿಷಯ**:- 2012-13 ನೇ ಸಾಲಿಗೆ ಸಂಬಂಧಿಸಿದ ಅಪೆಂಡಿಕ್ಸ್ ' ಬಿ ' ತಯಾರಿಸಿ ಕಳುಹಿಸಿಕೊಡುವ ಬಗ್ಗೆ.

<<>>

2012-13 ನೇ ಸಾಲಿನ ಅಪೆಂಡಿಕ್ಸ್ 'ಬಿ'ಗೆ ಸಂಬಂಧಿಸಿದ ಮಾಹಿತಿಯನ್ನು ನಿಗಧಿತ ನಮೂನೆಗಳಲ್ಲಿ ಮಂಜೂರಾದ ಹುದ್ದೆಗಳನ್ವಯ ಯೋಜನೆ ಮತ್ತು ಯೋಜನೇತರ ಲೆಕ್ಕ ಶೀರ್ಷಿಕೆಗಳಲ್ಲಿ ಪ್ರತ್ಯೇಕವಾಗಿ ದಿನಾಂಕ: 6-8-2011ರ ಒಳಗಾಗಿ ನೇರವಾಗಿ ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ವಿಭಾಗ, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ ಇವರ ಹೆಸರಿಗೆ ಕಳುಹಿಸಿ ಕೊಡತಕ್ಕದ್ದು.

ಅಪೆಂಡಿಕ್ಸ್ ' ಬಿ ' ತಯಾರಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಮುಖ್ಯ ಲೆಕ್ಕ ಶೀರ್ಷಿಕೆಯೊಂದಿಗೆ ಯೋಜನೆ / ಯೋಜನೇತರದ ಅಡಿ ಮಂಜೂರಾದ ಹುದ್ದೆಗಳ ವಿವರಗಳನ್ನು ಪ್ರತ್ಯೇಕ ನಮೂನೆಗಳಲ್ಲಿ ಸಲ್ಲಿಸತಕ್ಕದ್ದು. ಇದರೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ನಿಖರವಾದ ಮಾಹಿತಿಗಳನ್ನು ಭರ್ತಿ ಮಾಡಿ ತಮ್ಮ ಕಛೇರಿಗೆ ಹುದ್ದೆಗಳು ಮಂಜೂರಾದ ಎಲ್ಲ ಲೆಕ್ಕಶೀರ್ಷಿಕೆಗಳಿಗೆ ಪ್ರತ್ಯೇಕವಾಗಿ ವಿವರಗಳನ್ನು ದೃಢೀಕರಿಸಿ ಒದಗಿಸತಕ್ಕದ್ದು.

1. ವೃಂದಾವಾರು ಹುದ್ದೆಗಳಿಗನುಸಾರವಾಗಿ ವೇತನ ಶ್ರೇಣಿ ಹಾಗೂ ಮೂಲವೇತನವನ್ನು ಗರಿಷ್ಠದಿಂದ ಕನಿಷ್ಠದವರೆಗೆ ಲೆಕ್ಕಾಚಾರ ಮಾಡುವುದು.
2. ಮೂಲವೇತನದ ಒಟ್ಟು ಮೊತ್ತ ಹಾಗೂ ವಾರ್ಷಿಕ ವೇತನದ ಒಟ್ಟು ಮೊತ್ತವು ಕಾಲಂ 12 ರಲ್ಲಿನ ಅಂಕಿಅಂಶಗಳಿಗೆ ಹೊಂದಾಣಿಕೆಯಾಗತಕ್ಕದ್ದು.
3. ಖಾಲಿ ಹುದ್ದೆಗಳಿಗೆ ಆಯಾ ವೃಂದಾವಾರು ಹುದ್ದೆಗಳ ವೇತನ ಶ್ರೇಣಿಯ ಕನಿಷ್ಠ ವೇತನಕ್ಕೆ ಲೆಕ್ಕಾಚಾರ ಮಾಡತಕ್ಕದ್ದು.
4. ಖಾಲಿ ಹುದ್ದೆಗಳಿಗೆ ವಾರ್ಷಿಕ ವೇತನ ಬಡ್ತಿಯನ್ನು ಲೆಕ್ಕಾಚಾರ ಮಾಡಬಾರದು.
5. ವಾರ್ಷಿಕ ವೇತನ ಬಡ್ತಿಯನ್ನು ವೇತನ ಬಡ್ತಿಯ ದಿನಾಂಕದ ತಿಂಗಳಿನಿಂದ ಫೆಬ್ರವರಿ 2013ರ ವರೆಗಿನ ತಿಂಗಳುಗಳಿಗೆ ಮಾತ್ರ ಲೆಕ್ಕಾಚಾರ ಮಾಡತಕ್ಕದ್ದು.
6. ನಗರ ಪರಿಹಾರ ಭತ್ಯೆ, ಮನೆ ಬಾಡಿಗೆ ಭತ್ಯೆಗಳಿಗೆ ಆಯಾಯಾ ಸ್ಥಳಗಳಿಗೆ ಅನ್ವಯವಾಗುವ ಶೇಕಡವಾರು ದರಗಳನ್ನು ಕ್ರಮವಾಗಿ 14,15,16ರ ಕಾಲಂ ಗಳಲ್ಲಿ ನಮೂದಿಸಿ ಲೆಕ್ಕಾಚಾರ ಮಾಡತಕ್ಕದ್ದು. (ಎಷ್ಟು Percent ಎಂದು ನಮೂದಿಸಬೇಕು).
7. ನಿವೃತ್ತಿಯ ನಮೂನೆಯಲ್ಲಿ ನಿವೃತ್ತಿ ಹೊಂದುವ ಸಿಬ್ಬಂದಿಯ ನಿವೃತ್ತಿ ದಿನಾಂಕ, ಮೂಲವೇತನ, ತುಟ್ಟಿಭತ್ಯೆಗಳನ್ನು ಖಚಿತವಾದ ಗಳಿಕೆ ರಜೆಯ ದಿನಗಳಿಗೆ ಲೆಕ್ಕಾಚಾರ ಮಾಡತಕ್ಕದ್ದು.
8. ಅನುಬಂಧ-4 ರಲ್ಲಿನ ಮಂಜೂರಾದ ಒಟ್ಟು ವೃಂದಾವಾರು ಹುದ್ದೆಗಳು ಅನುಬಂಧ-2ರ ಮಾಹಿತಿಗೆ ತಾಳೆಯಾಗತಕ್ಕದ್ದು.
9. ಅಧಿಕಾರಿ ಮತ್ತು ಸಿಬ್ಬಂದಿಗಳ ವೈಯಕ್ತಿಕ ವೇತನ, ನಗದು ಗುಮಾಸ್ತರ ಭತ್ಯೆ ಮತ್ತು ವಿಶೇಷ ವೇತನಗಳನ್ನು ಪ್ರತ್ಯೇಕ ಕಾಲಂಗಳಲ್ಲಿ ತೋರಿಸಬೇಕು.
10. ಸಮವಸ್ತ್ರ ಭತ್ಯೆ ಯನ್ನು ' ಇತರೆ ಭತ್ಯೆಗಳು' ವಿವರಣಾ ಶೀರ್ಷಿಕೆಯಡಿ ನಮೂದಿಸಿ ಸಲ್ಲಿಸತಕ್ಕದ್ದು.
11. ವೈದ್ಯಕೀಯ ಭತ್ಯೆ (ರೂ. 50-00)ಯನ್ನು ' 020' **ವಿವರಣಾ ಶೀರ್ಷಿಕೆಯಡಿ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಬೇಕಾಗುವ ಅನುದಾನವನ್ನು ' 021 ' ಶೀರ್ಷಿಕೆಯಡಿ ಅನುಬಂಧ-2ರಲ್ಲಿ ಪ್ರತ್ಯೇಕವಾಗಿ ತೋರಿಸಿರುವ ಕಾಲಂನಲ್ಲಿಯೇ ನಮೂದಿಸಿ ಸಲ್ಲಿಸತಕ್ಕದ್ದು.**
12. ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಅಪೆಂಡಿಕ್ಸ್ ' ಬಿ ' ಯನ್ನು ಪ್ರತ್ಯೇಕ ನಮೂನೆಗಳಲ್ಲಿ ನೀಡುವುದು.
13. **ಅಪೆಂಡಿಕ್ಸ್ 'ಬಿ' ನ ಅನುಬಂಧಗಳೊಂದಿಗೆ ಹುದ್ದೆಗಳ ಸೃಷ್ಟಿಗಳಿಗೆ ಸಂಬಂಧಿಸಿದ ಸರ್ಕಾರಿ ಆದೇಶಗಳು ಮತ್ತು ಹುದ್ದೆಗಳ ಸ್ಥಳಾಂತರದಿಂದ ಹುದ್ದೆಗಳ ಸಂಖ್ಯೆಯಲ್ಲಾಗುವ ಹೆಚ್ಚಳ ಅಥವಾ ಕಡಿತಗಳ ಬಗ್ಗೆ ಆದೇಶಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.**

14. ಕಳೆದ ವರ್ಷ ಮೇಲ್ಕಂಡ ಕ್ರಮ ಸಂಖ್ಯೆ (13) ರಲ್ಲಿ ಕೇಳಲಾದ ಮಾಹಿತಿಗೆ ಕೆಲವು ಸಂಸ್ಥೆಗಳು ಆದೇಶದ ಸಂಖ್ಯೆಯನ್ನು ಮಾತ್ರ ನಮೂದಿಸಿ ಆದೇಶದ ಪ್ರತಿಯನ್ನು ಲಗತ್ತಿಸದೇ ಇರುವುದು ಕಂಡುಬಂದಿರುತ್ತದೆ. ಆದ್ದರಿಂದ ಯಾವುದೇ ಆದೇಶಗಳಿಲ್ಲದೆ ಅಪೆಂಡಿಕ್ಸ್ 'ಬಿ ' ಯನ್ನು ಸಲ್ಲಿಸಿದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.
15. ಅಪೆಂಡಿಕ್ಸ್ 'ಬಿ' ಯ ವಿವರಗಳು ಒಂದಕ್ಕಿಂತ ಹೆಚ್ಚು ಪುಟಗಳಿಗೆ ಮುಂದುವರಿದಲ್ಲಿ ಪ್ರತಿಯೊಂದು ಪುಟಕ್ಕೂ ತಲೆಬರಹ (Heading) ವನ್ನು ನಮೂದಿಸಿರಬೇಕು.

**ಸೂಚನೆ :– ಸಂಬಂಧಿಸಿದ ಮಾಹಿತಿಯನ್ನು ಲಗತ್ತಿಸಿರುವ ನಮೂನೆಗಳಲ್ಲಿಯೇ ಸಿ.ಡಿ ಯೊಂದಿಗೆ (Hard copy & Soft copy) ನುಡಿ ಸಾಫ್ಟವೇರ್ (Nudi Akshar-01) ನಲ್ಲಿ Excel ನಲ್ಲಿ ಕಳುಹಿಸಿಕೊಡತಕ್ಕದ್ದು. ಹಾಗೂ ಕೆಲವು ಸಂಸ್ಥೆಗಳಲ್ಲಿ ಪಾಸ್ ವರ್ಡ್ ಹಾಕಿರುವುದರಿಂದ ಪ್ರತಿ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪಾಸ್ ವರ್ಡ್ ಇಲ್ಲದ ಸಿ.ಡಿ.ಯನ್ನು ಕಳುಹಿಸಿಕೊಡುವುದು.**

**ಅಡಕ:ಅನುಬಂಧ 1,2,4,5 & 8 )**

ಆಯುಕ್ತರು
ಉದ್ಯೋಗ ಮತ್ತು ತರಬೇತಿ

ಇವರಿಗೆ,

1. ಸಹಾಯಕ ನಿರ್ದೇಶಕರು (ಆಡಳಿತ), ತರಬೇತಿ/ ಉದ್ಯೋಗ ವಿಭಾಗ/ನಿರ್ದೇಶನಾಲಯ
2. ಜಂಟೀ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ಹುಬ್ಬಳ್ಳಿ /ಗುಲ್ಬರ್ಗಾ /ಮೈಸೂರು
3. ಪ್ರಾಚಾರ್ಯರು, ಕೈಗಾರಿಕಾ ತರಬೇತಿ ಸಂಸ್ಥೆ – ಬಿ4ಲಿಟಿ –
4. ಸಹಾಯಕ ನಿರ್ದೇಶಕರು / ಉದ್ಯೋಗಾಧಿಕಾರಿಗಳು, ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, – – – –
5. ಆಡಳಿತಾಧಿಕಾರಿಗಳು, ತರಬೇತಿ ವಿಭಾಗ, ನಿರ್ದೇಶನಾಲಯ

## ಅ ನು ಬ ಂ ಧ - 1

ಯೋಜನೆ/ಯೋಜನೇತರ

2012-13 ನೇ ಸಾಲಿನ ಆಯವ್ಯಯ

ಅಧಿಕಾರಿಗಳ ವೇತನ, ಸಿಬ್ಬಂದಿ ವೇತನ, ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳಡಿಯಲ್ಲಿ 2011-12 ಮತ್ತು 2012-13ನೇ ಸಾಲಿನ ಆಯವ್ಯಯ ನಡುವಣ ವ್ಯತ್ಯಾಸ

| ಲೆಕ್ಕ ಶೀರ್ಷಿಕೆ | 2011-2012ನೇ ಸಾಲಿನ ಆಯವ್ಯಯ | 2012-2013ನೇ ಸಾಲಿನ ಆಯವ್ಯಯ | ಹೆಚ್ಚುವರಿ(+) ಇಳುವರಿಯ (-) ವ್ಯತ್ಯಾಸ | ಹೆಚ್ಚುವರಿ ಮಂಜೂರು ತೆಗೆದುಹಾಕುವ ಅಥವಾ ಪರಿಸ್ಕೃತಗೊಳಿಸಲು ಸರ್ಕಾರಿ ಆದೇಶಗಳ ಉದ್ಧರಣೆ ಗೊಳಿಸುವುದರೊಂದಿಗೆ ವ್ಯತ್ಯಾಸಕ್ಕಾಗಿ ವಿವರಣೆ : |
|---|---|---|---|---|
| 1 | 2 | 3 | 4 | 5 |
| | | | | |

## 2012–13ನೇ ಸಾಲಿನ ಅಪೆಂಡಿಕ್ಸ್ 'ಬಿ'

### ಅನುಬಂಧ–2

ಕೈಗಾರಿಕಾ ತರಬೇತಿ ಸಂಸ್ಥೆಯ ಹೆಸರು

| ಹೆಸರು ಶ್ರೀಮತಿ / ಶ್ರೀಯುತ | ಲಿಂಗ (ಪುರುಷ / ಸ್ತ್ರೀ ) | ಪದನಾಮ | ಅಂದಾಜುಗಳ ಪುಟಕ್ಕೆ ಉಲ್ಲೇಖ | ಹುದ್ದೆಯ ಮಂಜೂರಾದ ವೇತನ | | | | ಅಂಕಣ(ಸಿ) ನಲ್ಲಿರುವ ದರದಂತೆ ವರ್ಷಕ್ಕಾಗಿ ಏರ್ಪಾಟು ಮಾಡಿದ ಮೊತ್ತ | ವರ್ಷದೊಳಗೆ ಬರಬೇಕಾದ / ಬರಬೇಕಾಗಿರುವ ವೇತನ ಬಡ್ತಿ | | | ವರ್ಷಕ್ಕಾಗಿ ಒದಗಿಸಲಾದ ಒಟ್ಟು ಮೊತ್ತ ಅಂದರೆ ಅಂಕಣ 7 ಮತ್ತು 11 ಗಳು ಒಟ್ಟು ಸೇರಿ | ಪ್ರಯಾಣ ವೆಚ್ಚ ಖಾಯಂ ಮಾಸಿಕ ಪ್ರಯಾಣ ಭತ್ಯ ಮತ್ತು ಸಾರಿಗೆ ಸೌಲಭ್ಯ ಭತ್ಯೆ | ತುಟ್ಟಿ ಭತ್ಯೆ | ನಗರ ಪರಿಹಾರ ಭತ್ಯೆ/ ಗ್ರಾಮೀಣ ಭತ್ಯೆ | ಮನೆ ಬಾಡಿಗ್ಗೆ ಭತ್ಯೆ | ವೈದ್ಯಕೀಯ ಭತ್ಯೆ | ವೈದ್ಯಕೀಯ ವೆಚ್ಚ ಮರುಪಾವತಿ | ಎಸ್.ಎಲ್.ಎ ಮತ್ತು ಯು.ಎ. ನೀರಿನ ಭತ್ಯೆ ಯೋಜನಾ ಭತ್ಯ, ಬಟ್ಟೆ ಶುದ್ಧೀಕರಣ ಭತ್ಯೆ ಇತ್ಯಾದಿಗಳಂತ ಇತರೆ ನಿಗದಿತ ಭತ್ಯೆಗಳು |
|---|---|---|---|---|---|---|---|---|---|---|---|---|---|---|---|---|---|---|---|
| | | | | (ಎ) ಕನಿಷ್ಠ | (ಬಿ) ಗರಿಷ್ಠ | (ಸಿ) 1–3–2012 ರಂದು ಬಾಕಿ ಇರುವ ಸರ್ಕಾರಿ ನೌಕರನ ವಾಸ್ತವಿಕ ವೇತನ | ವೈಯಕ್ತಿಕ ವೇತನ/ವಿಶೇಷ ವೇತನ/ ನಗದು ಗುಮಾಸ್ತರ ಭತ್ಯೆ ಇತ್ಯಾದಿ | | (ಎ) ವೇತನ ಬಡ್ತಿಯ ದಿನಾಂಕ | (ಬಿ) ವೇತನ ಬಡ್ತಿಯ ದರ | (ಸಿ) ವರ್ಷಕ್ಕಾಗಿ ವೇತನ ಬಡ್ತಿಯ ಮೊತ್ತ | | | | | | | | |
| 1 | 2 | 3 | 4 | 5 | 6 | 7 | 7(ಎ) | 8 | 9 | 10 | 11 | 12 | 13 | 14 | 15 | 16 | 17 | 18 | 19 |

# ಅ ನು ಬ ಂ ಧ- 4

**ಯೋಜನೆ/ಯೋಜನೇತರ**

ಇಲಾಖೆ : ಕಛೇರಿಗೆ ಮಂಜೂರಾದ ಒಟ್ಟು ಸಂಖ್ಯಾಬಲವನ್ನು ಮತ್ತು ಯಾವುದಾದರೂ ತರುವಾಯದ ಬದಲಾವಣೆಗಳಿದ್ದರೆ ಅವುಗಳನ್ನು ತೋರಿಸುವ ಪಟ್ಟಿ:

ಇಲಾಖೆ ಹೆಸರು: ಉದ್ಯೋಗ ಮತ್ತು ತರಬೇತಿ

ಆಯವ್ಯಯ ವರ್ಗೀಕರಣ

| **ಲೆಕ್ಕ ಶೀರ್ಷಿಕೆ /ವೇತನ ಶ್ರೇಣಿ** | **2011-12ರ ಅಂದಾಜುಗಳ ಅನುಬಂಧ 'ಬಿ' ನಲ್ಲಿ ಸೇರಿದಂತೆ ಮಂಜೂರು ಮಾಡಲಾದ ಹುದ್ದೆಗಳ ಸಂಖ್ಯೆ:** | **ಹುದ್ದೆಗಳ ತರುವಾಯದ ವ್ಯತ್ಯಾಸ ಅಂದರೆ ಹುದ್ದೆಗಳನ್ನು ರದ್ದು ಗೊಳಿಸುವುದು/ಸೃಷ್ಟಿಸುವುದು** | **ಹುದ್ದೆಗಳಿಗಾಗಿ ಸರ್ಕಾರಿ ಆದೇಶಗಳ ಮಂಜೂರಾತಿ ಪ್ರಾಧಿಕಾರಕ್ಕೆ ಉಲ್ಲೇಖ** |
|---|---|---|---|
| | | | |

## ಅ ನು ಬ ಂ ಧ- 5

2012-13 ನೇ ಸಾಲಿನ ಆಯವ್ಯಯ

ಯೋ./ಯೋ.ತರ

ಲೆಕ್ಕ ಶೀರ್ಷಿಕೆ:

| ಕ್ರಮ ಸಂಖ್ಯೆ | ವೇತನ ಶ್ರೇಣಿ | ಯೋಜನೆ/ ಯೋಜನೇತರ |
|---|---|---|
| 1 | 4800-100-6000-150-7100-175-7275 | |
| 2 | 5200-100-6000-125-6500-150-7100-175-7800-200-8200 | |
| 3 | 5500-100-6000-125-6500-150-7100-175-7800-200-8600-225-9500 | |
| 4 | 5800-100-6000-125-6500-150-7100-175-7800-200-8600-225-9500-250-10500 | |
| 5 | 6250-125-6500-150-7100-175-7800-200-8600-225-9500-250-10500-300-12000 | |
| 6 | 7275-175-7800-200-8600-225-9500-250-10500-300-12300-350-13350 | |
| 7 | 8000-200-8600-225-9500-250-10500-300-12300-350-14400-400-14800 | |
| 8 | 8825-225-9500-250-10500-300-12300-350-14400-400-16000 | |
| 9 | 9500-250-10500-300-12300- 350-14400 - 400-16800-450-17250 | |
| 10 | 10000-250-10500-300-12300-350-14400-400-16800-450-18150 | |
| 11 | 10800-300-12300-350-14400-400-16800-450-19500-525-20025 | |
| 12 | 11400-300-12300-350-14400-400-16800-450-19500-525-21600 | |
| 13 | 12000-300-12300-350-14400-400-16800-450-19500-525-22650 | |
| 14 | 14050-350-14400-400-16800-450-19500-525-22650-600-25050 | |
| 15 | 15200-400-16800-450-19500-525-22650-600-25650 | |
| 16 | 18150-450-19500-525-22650-600-26250-675-26925 | |
| 17 | 20025-525-22650-600-26250-675-28275 | |
| 18 | 22125-525-22650-600-26250-675-30300 | |
| 19 | 24450-600-26250-675-30300-750-31800 | |
| 20 | 26250-675-30300-750-34800-850-36500 | |
| 21 | 28275-675-30300-750-34800-850-39900 | |
| | ಜುಮ್ಲಾ | |

ಅನುಬಂಧ-8

ಯೋಜನೆ /ಯೋಜನೇತರ

2012-13ನೇ ಸಾಲಿನ ಆಯವ್ಯಯ

2012-13 ನೇ ಸಾಲಿನ ಅಪೆಂಡಿಕ್ಸ್ ಬಿ ಗೆ ಸಂಬಂಧಿಸಿದಂತೆ ಲಿಂಗಾಧಾರಿತ ಪುರುಷ ಮತ್ತು ಮಹಿಳಾ ಉದ್ಯೋಗಿಗಳ ವಿವರಣಾ ಪಟ್ಟಿ :

ಲೆಕ್ಕ ಶೀರ್ಷಿಕೆ ವಿವರ :

| ಕ್ರಮ ಸಂಖ್ಯೆ | ವೃಂದಾವಾರು ಹುದ್ದೆಗಳು | ಪುರುಷರು | ಮಹಿಳೆಯರು | ಖಾಲಿ | ಒಟ್ಟು ಹುದ್ದೆಗಳು |
|---|---|---|---|---|---|
| 1 | ಜಂಟೀ ನಿರ್ದೇಶಕರು | | | | |
| 2 | ಪ್ರಾಚಾರ್ಯರು ದರ್ಜೆ : 1 | | | | |
| 3 | ಪ್ರಾಚಾರ್ಯರು ದರ್ಜೆ : 2 | | | | |
| 4 | ಸಹಾಯಕ ನಿರ್ದೇಶಕರು | | | | |
| 5 | ಆಡಳಿತ ಸಹಾಯಕರು | | | | |
| 6 | ತರಬೇತಿ ಅಧಿಕಾರಿ | | | | |
| 7 | ಕಿರಿಯ ತರಬೇತಿ ಅಧಿಕಾರಿಗಳು | | | | |
| 8 | ಕಛೇರಿ ಅಧೀಕ್ಷಕರು | | | | |
| 9 | ಪ್ರಥಮ ದರ್ಜೆ ಸಹಾಯಕರು | | | | |
| 10 | ಶೀಘ್ರಲಿಪಿಗಾರರು | | | | |
| 11 | ದ್ವಿತೀಯ ದರ್ಜೆ ಸಹಾಯಕರು | | | | |
| 12 | ಬೆರಳಚ್ಚುಗಾರರು | | | | |
| 13 | ಮೆಕ್ಯಾನಿಕ್ | | | | |
| 14 | ವಾಹನ ಚಾಲಕರು | | | | |
| 15 | ಕಾರ್ಯಾಗಾರ ಸಹಾಯಕರು | | | | |
| 16 | ಗ್ರೂಪ್ 'ಡಿ' | | | | |
| | ಒಟ್ಟು: | | | | |